# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಸಕಲೇಶಪುರ

## C.C.No. 80 /2022

| | | |
|---|---|---|
| **ಹೆಸರುಃ** | ಸವಿತ | CW-5 |
| **ತಂದೆ/ಗಂಡ ಹೆಸರುಃ** | ಮಹಂತೇಶ್ | PW-6 |
| **ವಯಸ್ಸು** | 38 ವರ್ಷ | |
| **ವೃತ್ತಿ** | ಮಹಿಳಾ ಮೇಲ್ವಿಚಾರಕಿ, ಸಿ ಡಿ ಪಿ ಓ ಕಛೇರಿ, ನಿಪ್ಪಾಣಿ | |
| **ವಿಳಾಸಃ** | ನಿಪ್ಪಾಣಿ | **ದಿನಾಂಕಃ20-10-2023** |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ಶ್ರೀ ಎ ಪಿ ಪಿ ಯವರಿಂದ

ನಾನು 03-02-2020 ರಿಂದ 06-07-2023 ರವರೆಗೆ ಸಕಲೇಶಪುರದ ಶಿಶು ಅಭಿವೃದ್ಧಿ ಯೋಜನಾ ಕಛೇರಿಯಲ್ಲಿ ಮೇಲ್ವಿಚಾರಕಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ *28-06-2021* ರಂದು ಚಾಸಾ-*3* ಮತ್ತು *4* ರವರು ಹಾಸನ ಜಿಲ್ಲಾ ಸಮಗ್ರ ಮಕ್ಕಳ ರಕ್ಷಣಾ ಘಟಕದಿಂದ ಮಕ್ಕಳ ಸಹಾಯವಾಣಿ *1098* ಕ್ಕೆ ಹಿರುದ್ದಿ ಗ್ರಾಮ, ಹಾನುಬಾಳು ಹೋಬಳಿ, ಸಕಲೇಶಪುರ ತಾಲ್ಲೂಕಿನಲ್ಲಿ ಬಾಲ್ಯ ವಿವಾಹ ಆಗಿದೆ ಎಂದು ದೂರು ಬಂದಿದ್ದು ಸದರಿ ದೂರಿನ ಮೇರೆಗೆ ನಮ್ಮ ಕಛೇರಿಗೆ ಚಾಸಾ-*3* ಮತ್ತು *4* ರವರು ಬಂದು ವಿಚಾರ ತಿಳಿಸಿ ನನ್ನನ್ನು ಹಿರುದ್ದಿ ಗ್ರಾಮದ ಆರೋಪಿಯ ಮನೆಗೆ ಕರೆದುಕೊಂಡು ಹೋದರು. ನಾವು ಹೋದಾಗ ಆರೋಪಿ ಮತ್ತು ನೊಂದ ಬಾಲಕಿ ಚಾಸಾ-*2* ರವರು ಮನೆಯಲ್ಲಿ ಇದ್ದರು. ನಾವು ಚಾಸಾ-*2* ರವರನ್ನು ಕರೆದುಕೊಂಡು ಬಂದು ಹಾಸನದ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸಿರುತ್ತೇವೆ. ನಾನು ಹೇಳಿಕೆ ಕೊಟ್ಟಿರುತ್ತೇನೆ. (ಆರೋಪಿಯು ಗೈರು ಹಾಜರಾಗಿದ್ದು ಆರೋಪಿ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು ಆರೋಪಿಯನ್ನು ಗುರುತಿಸುವಲ್ಲಿ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ ) ಚಾಸಾ-*2* ರವರನ್ನು ನೋಡಿದಲ್ಲಿ ಗುರುತಿಸುತ್ತೇನೆ.

**ಪಾಟೀ ಸವಾಲು ಃ ಆರೋಪಿ ಪರ** ಶ್ರೀ ಬಿ ಎನ್ ಎಸ್ **ವಕೀಲರಿಂದ**

ನಮ್ಮ ಕಛೇರಿಗೆ ಹಿರುದ್ದಿ ಗ್ರಾಮದಲ್ಲಿ ಬಾಲ್ಯ ವಿವಾಹ ಆಗಿದೆ ಎಂದು ಯಾವುದೇ ದೂರು ಮತ್ತು ಮಾಹಿತಿ ಬಂದಿರುವುದಿಲ್ಲ ಎಂದರೆ ಸರಿ. ನಮ್ಮ ಇಲಾಖಾ ವತಿಯಿಂದ

ನಾವು ಬಾಲ್ಯ ವಿವಾಹ ಆದ ಬಗ್ಗೆ ಯಾವುದೇ ದೂರನ್ನು ದಾಖಲು ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ನಾವು ಆರೋಪಿ ಮನೆಗೆ ಭೇಟಿ ಕೊಟ್ಟಾಗ ಅಲ್ಲಿ ಮದುವೆಯಾದ ಬಗ್ಗೆ ಯಾವುದೇ ದಾಖಲಾತಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ನಾವು ಚಾಸಾ-2 ರವರು ಅಪ್ರಾಪ್ತ ವಯಸ್ಕಳು ಎಂದು ತಿಳಿದುಕೊಳ್ಳಲು ಯಾವುದೇ ದಾಖಲಾತಿ ಪರಿಶೀಲಿಸಿರುವುದಿಲ್ಲ ಎಂದರೆ ಸರಿ. ನಾವು ಸದರಿ ಗ್ರಾಮದಲ್ಲಿ ಆರೋಪಿಯ ಮನೆಯ ಅಕ್ಕಪಕ್ಕದವರನ್ನು ಬಾಲ್ಯ ವಿವಾಹ ಆದ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರನ್ನು ಕರೆದುಕೊಂಡು ಬಂದು ಮಕ್ಕಳ ರಕ್ಷಣಾ ಘಟಕಕ್ಕೆ ಕಳುಹಿಸಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಇಲಾಖಾ ಅಂಕಿ ಅಂಶಕ್ಕೋಸ್ಕರ ಸುಳ್ಳು ದೂರನ್ನು ದಾಖಲು ಮಾಡಿದ್ದು ನನ್ನ ಮೇಲಾಧಿಕಾರಿಗಳ ಮಾತಿನ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಜೆ ಎಂ ಎಫ್ ಸಿ, ಸಕಲೇಶಪುರ**